ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL.www.anekal-pa.in, web5.kar.nic.in/e-vinyasa

## ಮಾರ್ಪಡಿತ ಪ್ರಾರಂಭಿಕ ಪ್ರಮಾಣ ಪತ್ರ

(ನಮೂನೆ-3)

ಸಂಖ್ಯೆ: ಆಯೋಪ್ರಾ/ಎಲ್‌ಎಓ/05/2011-12 ದಿನಾಂಕ: 29 DEC 2017

**ವಿಷಯ:** ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ನೆರಳೂರು ಗ್ರಾಮದ ಸ.ನಂ.46/3ಸಿರಲ್ಲಿ 0-39ಗುಂಟೆ, 52/4ರಲ್ಲಿ 0-14ಗುಂಟೆ, 52/3ರಲ್ಲಿ 0-11ಗುಂಟೆ, 54/3ರಲ್ಲಿ 02ಎಕರೆ 32ಗುಂಟೆ, 51ರಲ್ಲಿ 01ಎಕರೆ 05ಗುಂಟೆ, 51ರಲ್ಲಿ 03ಎಕರೆ 01ಗುಂಟೆ, 51ರಲ್ಲಿ 0-30ಗುಂಟೆ ಒಟ್ಟು 09ಎಕರೆ 12ಗುಂಟೆ ಪ್ರದೇಶಕ್ಕೆ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ (Group Housing) ಅನುಮೋದನೆ ನೀಡುವ ಸಂಬಂಧ.

**ಉಲ್ಲೇಖ:** 1) ಮೆ.ಎಸ್.ಎನ್.ಎನ್.ಪ್ರಾಪರ್ಟೀಸ್ ಎಲ್‌ಎಲ್‌ಪಿ ಪರವಾಗಿ ಪಾಲುದಾರರಾದ ಶ್ರೀ ಪಾ ಸಂಜಯ್ ಇವರ ಅರ್ಜಿ ದಿನಾಂಕ:11.04.2017.

2) ದಿನಾಂಕ:29.06.2017ರಂದು ನಡೆದ ಪ್ರಾಧಿಕಾರದ 61ನೇ ಸಭೆಯ ವಿಷಯ ಸಂಖ್ಯೆ:38ರ ತೀರ್ಮಾನ.

3) ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ
ಈ ಹಿಂದೆ ದಿನಾಂಕ:17.11.2011 ಡಿ.ಡಿ. ಸಂಖ್ಯೆ:683181 ರೂ.7,67,000/-
ಹಾಗೂ ಕೆರೆಗಳಲ್ಲಿನ ನೀರು ಸಂರಕ್ಷಣೆ ಸಂಬಂಧ ಡಿ.ಡಿ.ಸಂಖ್ಯೆ:683182ರೂ.9,37,500/-
ಮತ್ತು ದಿನಾಂಕ: 18.07.2017ರಲ್ಲಿ ಡಿ.ಡಿ.ಸಂಖ್ಯೆ:575820,575821 ರೂ. 9,000/-
ಮತ್ತು ಕೆರೆಗಳಲ್ಲಿನ ನೀರು ಸಂರಕ್ಷಣೆ ಸಂಬಂಧ ದಿನಾಂಕ:16.08.2017,22,09.2017
ಡಿ.ಡಿ.ಸಂಖ್ಯೆ:575922,247523ರೂ.4,500/- ರಶೀತಿ ಸಂಖ್ಯೆ:1133910,
1133181,1133989 ದಿನಾಂಕ:11.08.2017 ಮತ್ತು ದಿನಾಂಕ:26.09.2017)

4) ಅರ್ಜಿದಾರರ ಮಾರ್ಪಡಿತ ಪರಿತ್ಯಾಜನಾ ಪತ್ರ ದಿನಾಂಕ:04.11.2017.

5) ತಿದ್ದುಪಡಿ ಪರಿತ್ಯಜನಾ ಪತ್ರ ದಿನಾಂಕ:29.12.2017.

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಂತೆ, ಆನೇಕಲ್ ತಾಲ್ಲೂಕು, ನೆರಳೂರು ಗ್ರಾಮದ ಸ.ನಂ.46/3ಸಿರಲ್ಲಿ 0-39ಗುಂಟೆ, 52/4ರಲ್ಲಿ 0-14ಗುಂಟೆ, 52/3ರಲ್ಲಿ 0-11ಗುಂಟೆ, 54/3ರಲ್ಲಿ 02ಎಕರೆ 32ಗುಂಟೆ, 51ರಲ್ಲಿ 01ಎಕರೆ 05ಗುಂಟೆ, 51ರಲ್ಲಿ 03ಎಕರೆ 01ಗುಂಟೆ, 51ರಲ್ಲಿ 0-30ಗುಂಟೆ ಒಟ್ಟು 09ಎಕರೆ 12ಗುಂಟೆ ಪ್ರದೇಶಕ್ಕೆ ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಅನುಮೋದನೆ ಕೋರಿರುತ್ತಾರೆ. ಜಮೀನಿನ ಮೇಲೆ 08ಎಕರೆ 36ಗುಂಟೆ ಪ್ರದೇಶ ಮಾತ್ರ ಲಭ್ಯವಿದ್ದು, ಸಲ್ಲಿಸಿದ ಪ್ರಸ್ತಾವನೆಯನ್ನು ಉಲ್ಲೇಖ(2)ರಂತೆ ನಡೆದ ಆನೇಕಲ್ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿ ಸಭೆಯಲ್ಲಿ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಗಿರುತ್ತದೆ. ಹಾಗೂ ಈಗಾಗಲೇ ಸದರಿ ಪ್ರಕರಣದಲ್ಲಿ ಉಲ್ಲೇಖ(3)ರಂತೆ ಸಂಬಂಧಿತ ಶುಲ್ಕವನ್ನು ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಪಾವತಿಸಲಾಗಿದೆ. ಉಲ್ಲೇಖ(4)ರಂತೆ ಉದ್ಯಾನವನ ಪ್ರದೇಶವನ್ನು ಪ್ರಾಧಿಕಾರಕ್ಕೆ ಮಾರ್ಪಡಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುತ್ತದೆ. ಉಲ್ಲೇಖ(5)ರಂತೆ ಸದರಿ ಪತ್ರದಲ್ಲಿ ಉದ್ಯಾನವನದ ಚಕ್ಕುಬಂದಿ ವ್ಯತ್ಯಾಸವಾಗಿದ್ದು, ಇದನ್ನು ತಿದ್ದುಪಡಿ ಮಾಡಿ ತಿದ್ದುಪಡಿ ಪರಿತ್ಯಜನಾ ಪತ್ರ ಸಲ್ಲಿಸಿರುತ್ತಾರೆ.

ಮು.ತಿ.ನೋ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17ರಡಿಯಲ್ಲಿ **ಮೆ.ಎಸ್.ಎನ್.ಎನ್.ಪ್ರಾಪರ್ಟೀಸ್ ಎಲ್‌ಎಲ್‌ಪಿ ಪರವಾಗಿ ಪಾಲುದಾರರಾದ ಶ್ರೀ ಷಾ ಸಂಜಯ್**,ಇವರಿಗೆ 08ಎಕರೆ 36ಗುಂಟೆ ಪ್ರದೇಶಕ್ಕೆ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ(Group Housing)ಈ ಕೆಳಕಂಡ ನಿಬಂಧನೆಗಳೊಡನೆ ಅನುಮೋದಿಸಲಾಗಿದೆ.

1) ಮೇಲ್ಕಂಡ ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆಯಲ್ಲಿನ ಬ್ಲಾಕ್‌ಗಳಲ್ಲಿ ಕಟ್ಟಡ ಕಟ್ಟುವ ಮುನ್ನ ನಕ್ಷೆಯನ್ನು ಈ ಕಛೇರಿಯಿಂದ ನಿಯಮಗಳ ಪ್ರಕಾರ ಪ್ರಾರಂಭಿಕ ಪ್ರಮಾಣ ಪತ್ರ ಪಡೆದು ನಂತರ ನೆರಳೂರು ಗ್ರಾಮಪಂಚಾಯ್ತಿ ಯಿಂದ ಕಟ್ಟಡ ಪರವಾನಿಗೆ ಪಡೆದು ನಂತರ ಕಟ್ಟಡದ ಕೆಲಸವನ್ನು ಪ್ರಾರಂಭಿಸುವುದು.
2) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರವನ್ನು ನಿಯೋಜಿಸಿಕೊಳ್ಳತಕ್ಕದಲ್ಲ.
3) ಈಗ ನೀಡಿರುವ ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಕಟ್ಟಲು ಪ್ರಾಧಿಕಾರ -ದಿಂದ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವುದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಕಟ್ಟಡ ಕಟ್ಟಲು ಸಾಧ್ಯವಾಗದಿದ್ದಲ್ಲಿ ಅನುಮತಿಯನ್ನು ಕಾಲಮಿತಿಯೊಳಗೆ ಸೂಕ್ತ ಕಾರಣಗಳನ್ನು ಸಲ್ಲಿಸಿ ನವೀಕರಿಸಿಕೊಳ್ಳತಕ್ಕದ್ದು.
4) ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ ಅಂದರೆ ಉದ್ಯಾನವನ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ ಅಭಿವೃದ್ಧಿಪಡಿಸತಕ್ಕದ್ದು.
5) ಪ್ರಸ್ತಾವಿತ ಮಾರ್ಪಡಿತ ವಸತಿ ಸಮುಚ್ಛಯ ಪ್ರದೇಶದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್‌ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳಿಗೆ ಒಳಪಟ್ಟಿರಬೇಕು ಹಾಗೂ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪ್ರಾಧಿಕಾರದಿಂದ ಪಡೆಯುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ ಅವಶ್ಯವಾಗಿ ನಿರಾಕ್ಷೇಪಣಾ ಪತ್ರ ಪಡೆಯತಕ್ಕದ್ದು.
6) ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಕಾರ್ಯಗತಗೊಳಿಸುವ ಮೊದಲು ಕರ್ನಾಟಕ ಗ್ರಾಮ ಪಂಚಾಯಿತಿ ಕಾಯ್ದೆಯಡಿ ನೆರಳೂರು ಗ್ರಾಮಪಂಚಾಯ್ತಿ ಯಿಂದ ಪರವಾನಗಿ ಪಡೆಯತಕ್ಕದ್ದು.
7) ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೇ ಮಾರ್ಪಡಿತ ವಸತಿ ಅಭಿವೃದ್ಧಿ ನಕ್ಷೆಗೆ ಯಾವುದೇ ಬದಲಾವಣೆಯನ್ನು ಮಾಡಬಾರದು.
8) ನಿವೇಶನದ ಆವರಣದೊಳಗೆ ಮಳೆಯ ನೀರನ್ನು ಸಂರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
9) ಅನುಮೋದಿತ ಮಾರ್ಪಡಿತ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು, ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸುವುದು.
10) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.
11)ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
12) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.

ಪು.ತಿ.ನೋ.

13) ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಸಮೂಹ ವಸತಿ ನಕ್ಷೆಗೆ ನೀಡಿರುವ ಅಂಗೀಕಾರ ತಂತಾನೆ ರದ್ದುಗೊಳ್ಳುತ್ತದೆ.

14)ಈ ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆಯಲ್ಲಿ ಬರುವ ಕಟ್ಟಡಗಳ ಮಾರಾಟ ಸಂಬಂಧ ನೀಡುವ ವಿಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

15) ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (paved foot path) ನಿರ್ಮಿಸುವುದು.

16)ಅನುಮೋದಿತ ಮಾರ್ಪಡಿತ ವಸತಿ ಅಭಿವೃದ್ಧಿ ನಕ್ಷೆಗೆ ಮಳೆ ನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

17) ಪ್ರಸ್ತಾಪಿತ ಪ್ರದೇಶದಲ್ಲಿ ಸೂಕ್ತವಾದ ಕಡೆ ಘನತ್ಯಾಜ್ಯ ನಿರ್ವಹಣೆಗಾಗಿ ಜಾಗವನ್ನು ಕಾಯ್ದಿರಿಸತಕ್ಕದ್ದು.

18)ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ಪಾಲಿಸತಕ್ಕದ್ದು.

19)ಮಾರ್ಪಡಿತ ವಸತಿ ಸಮುಚ್ಛಯ ಯೋಜನಾ ಪ್ರದೇಶದಲ್ಲಿ ರಸ್ತೆಗಳ ಬದಿಯಲ್ಲಿ ಗಿಡಮರಗಳನ್ನು ನೆಡತಕ್ಕದ್ದು.

20)ಈ ಹಿಂದೆ ಪ್ರಾಧಿಕಾರದಿಂದ ಪತ್ರ ಸಂಖ್ಯೆ:ಆಯೋಪ್ರಾ/ಎಲ್‌ಎಓ/05/2011-12 ದಿನಾಂಕ:23.12.2011ರಲ್ಲಿ ಅನುಮೋದಿಸಿದ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ವಸತಿ ಅಭಿವೃದ್ಧಿಯೋಜನಾ ನಕ್ಷೆಯನ್ನು ರದ್ದುಪಡಿಸಲಾಗಿದೆ.

21) ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅಧಿಕಾರ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

22)ಪ್ರಸ್ತಾವಿತ ಪ್ರದೇಶದಲ್ಲಿ ವಿಕಲಚೇತನರಿಗೆ ಅನುಕೂಲವಾಗುವಂತೆ ರಸ್ತೆಯನ್ನು ಕಡ್ಡಾಯವಾಗಿ ಅಭಿವೃದ್ಧಿಪಡಿಸತಕ್ಕದು.

23) ಇತರೆ ಸಾಮಾನ್ಯ ಷರತ್ತುಗಳು.

29/12/17

**ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು**
**ಗ್ರಾಮಾಂತರ ಯೋಜನಾ ಜಂಟಿನಿರ್ದೇಶಕರು,**
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,
**ಮೆ.ಎಸ್.ಎನ್.ಎನ್.ಪ್ರಾಪರ್ಟೀಸ್ ಎಲ್‌ಎಲ್‌ಪಿ**
**ಪರವಾಗಿ ಪಾಲುದಾರರಾದ ಶ್ರೀ ಷಾ ಸಂಜಯ್,**
ನಂ.4, 2ನೇ ಪ್ಲೋರ್, ಎಲಿಪ್ಯಾಂಟ್ ರಾಕ್ ರೋಡ್,
3ನೇ ಬ್ಲಾಕ್, ಜಯನಗರ, ಬೆಂಗಳೂರು-560 011.